ಭಾರತೀಯಆದಿಮಜಾತಿಸೇವಕಸಂಘ (ರಿ)
ಬಿ.ಎ.ಜೆ. ಎಸ್. ಎಸ್. ಕಲಾಮತ್ತುವಾಣಿಜ್ಯಮಹಿಳಾಮಹಾವಿದ್ಯಾಲಯ
ಹಲಗೇರಿರಸ್ತೆ.
Permanently Affiliated to Karnataka State Women's University Bijapur.
Bhartiya Adimjati Sevak Sangh(R)
BA JSS ARTS AND COMMERCE COLLEGE FOR WOMEN
Sri Gayatri Campus, Halageri Road Ranebennur581115 Dist.: Haveri State Karnataka
STD:08373- Office: 267968, 297468, Mobile: 9481736128
Email: bajsswck09@gmail.com web: bajsswomenscollege.com



ಶೋಧ ಬರಹ

(ಸಂಶೋಧನಾ ಲೇಖನಗಳ ಸಂಗ್ರಹ)
ಸಂಪುಟ–ಎರಡು

ಸಂಪಾದಕರು
ಮಂಜುನಾಥ ಎಸ್.ಪಿ.

ಪುರು ಪ್ರಕಾಶನ
ದಾಸರಹಳ್ಳಿ
ಹೊಸಕೋಟೆ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ.

Title of the book: **SHODH BARAHA**
(Collection of Research Articles)

ಶೀರ್ಷಿಕೆ : ಶೋಧ ಬರಹ
(ಸಂಶೋಧನಾ ಲೇಖನಗಳ ಸಂಗ್ರಹ)

Editor
MANJUNATHA S P
s/o Padmaraju S P
Shivapura Village & Post
Hangala Hobli, Gundlupet Tq,
Chamarajanagar District-571111
Mobile No. 8123800623.

Published by:
PURU Prakashana
Dasarahalli Village & Post
Hosakote Tq.
Bangalore Rural-562114
purushothama3689@gmail.com
Mobile: 9686279589

Frist Impression: 2021
Pages: x+515
Price: 150/-
copys: 500
Size: 1/8 Demy
Paper: 70 GSM/NSMaplitho.

©authors

ISBN: **978-81-949441-8-8**

Cover page Design: K V RAMESHA

Printer: **RAGHU PRINT SYSTEM**
Mobile-

/30/22, 12:07 PM Volume-2_SHODHA BARAHA (2)_page-0005.jpg

೧೦. ಬಹುಮುಖ ಪ್ರತಿಭೆ ಶಿವರಾಮ ಕಾರಂತ
– ಸ್ವಾಮಿಲಿಂಗ ಹಾವಳ

೧೧. ಬೇಂದ್ರೆಯವರ ವಿಮರ್ಶೆ : ಸಾಹಿತ್ಯ ಮತ್ತು ವಿಮರ್ಶೆ. ಸಾಹಿತ್ಯ ಸಂಶೋಧನೆ. ವಿಚಾರ ಮಂಜರಿ
– ನಾಗರಾಜ ಮಳ್ಳನ ಕುರಿಯಾಳ

೧೨. ತೇಜಸ್ವಿ ಕಥಾನಕಗಳಲ್ಲಿ ಹೋರಾಟದ ನೆಲೆಗಳು
– ಚಲುವರಾಜು

೧೩. ತೇಜಸ್ವಿಯವರ ಮಾಯಾಲೋಕ -೧ : ಕಾದಂಬರಿಯಲ್ಲಿ ಸಮಾಜ ಮತ್ತು ಪರಿಸರ ಪ್ರಜ್ಞೆಯ ಅಂತರ ಸಂಬಂಧಗಳ ಸ್ವರೂಪ
– ಮಾಜಾಸಾಬ ಎಂ.ಕೆ.

೧೪. ಪ್ರೇಮಚಂದ್ರ ಮತ್ತು ನಿರಂಜನ ಸಣ್ಣ ಕತೆಗಳ ತೌಲನಿಕ ಅಧ್ಯಯನ (ಆಧುನಿಕ ಮತ್ತು ಮೂಢನಂಬಿಕೆ ಎಂಬ ಪರಿಕಲ್ಪನೆಗಳನ್ನು ಆಸಲಕ್ಷಿಸಿ)
– ರವಿಚಂದ್ರ

೧೫. ಪಾತರಗಿತ್ತಿ ಕಾದಂಬರಿಯಲ್ಲಿ ಸ್ತ್ರೀ ಸಂವೇದನೆ
– ಅಪ್ಪಣ್ಣ

೧೬. ತರಾಸು ಕಾದಂಬರಿ ಆಧಾರಿತ ಚಲನಚಿತ್ರಗಳ ಮಜು
– ತರಾಸಾಲಿಪ್ಪ ಅಯೋಜ

೧೭. ದಲಿತ ಬಂಡಾಯ ಕಾದಂಬರಿಗಳಲ್ಲಿ ಗ್ರಾಮೀಣ ಆಹಾರ ಪದ್ಧತಿ
– ಶಿವಕುಮಾರ ಆರ್.

೧೮. ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಸೂಫಿಗಳು
– ಇಸ್ಮಾಮಿಲ್ ಖಾದ್ರಿ

೧೯. ಕನ್ನಡ ಕಟ್ಟಾಳು ನಮ್ಮ ಶಾಂತರಸರು
– ರೇಖಾ ವಿ.

೨೦. ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಜನಪದ ಸಾಹಿತ್ಯ ಪ್ರೇರಣೆ ಮತ್ತು ಪ್ರಭಾವ
– ಭಾರತಿ

೨೧. ಕೋಟಗಾನಹಳ್ಳಿ ರಾಮಯ್ಯ ಅವರ ನಾಟಕಗಳಲ್ಲಿ ಮಹಿಳೆ
– ಪಕಾಶ ಕೆ.

೨೨. ಗ್ರಾಮೀಣ ನಾಟಕ ರಂಗಭೂಮಿಯ ವಿಕಾಸ
ಯಮನರಾಜು ಎಂ

೨೩. ಸೃಶಾನ ಕುರುಕ್ಷೇತ್ರ ನಾಟಕದ ಕಾರಣದ ಕಾರಣ ಮತ್ತು ಪರಿಣಾಮಗಳು
– ಸ್ಫೂರ್ತಿ ಕೆ.ಎಸ್.

೨೪. ಬಾಗಳ : ನಾಮ ವಿಶ್ಲೇಷಣೆ
– ಬಸವರಾಜಪ್ಪ ಪೂಜಾರ

೨೫. ಕಪ್ಪತ್ತಗುಡ್ಡದ ಪರಿಸರ ಮತ್ತು ಜನಪದರ ಸಂಬಂಧ
– ಕುಮಾರ ಯಲಬಳ್ಳಿ

೨೬. ಆಚರಣೆಯ ಹಿನ್ನೆಲೆಯಲ್ಲಿ ನೀರಿನ ಮಹತ್ವ
– ತಿಪ್ಪೇಸ್ವಾಮಿ ಎಸ್.

೨೭. ಜಲ – ಒಂದು ಸಂಪ್ರದಾಯ
– ಹನುಮಂತಪ್ಪ ಬ್ಯಾಡಗಿ

೨೮. ಕೊರೋನ ಸಂಬಂಧಿತ ಆಚರಣೆಗಳು
– ಆನಂದ ಬೆಂಡರವಾಡಿ

೨೯. ಕೋವಿಡ್-೧೯ : ಸೂಳೆಕೆರೆ ಪರಿಸರದಲ್ಲಿನ ಸಾಂಸ್ಕೃತಿಕ ಪಲ್ಲಟಗಳು
– ಮಹಾಂತೇಶ ಜೆ.ಆರ್.

೩೦. ತಿಗಳರ ಸಮುದಾಯ ಧಾರ್ಮಿಕ ಸ್ಥಳಗಳು
– ಅಪ್ಪಣ್ಣ ಕೆ.

೩೧. ಮಲೆ ಮಹದೇಶ್ವರ ಪರಂಪರೆಯನ್ನು ಪ್ರತಿಪಾದಿಸುವ ನಂಬಿಕೆಗಳು ಮತ್ತು ಆಚರಣೆಗಳು
– ಮಂಜುನಾಥ ಎಸ್.ಪಿ.

೩೨. ಬಂಜಪ್ಪನ ಕಾವ್ಯ : ತಾಳೇಮರ್ಗಿ
– ಶಿವರಾಜು ಎಸ್.

೩೩. ಕುರುಬರ ಸಂಸ್ಕೃತಿ ಮತ್ತು ಡೊಳ್ಳಿನ ಪರಂಪರೆ
– ಬಿಳೇನಸಿದ್ದ ಪರಾದಾರ

ಮುಂದುವರೆಸುತ್ತಾರೆ. ಇಲ್ಲಿ ತುಂಬಿದ ಕೊಡ ಇಡುವ ಉದ್ದೇಶ ಏನೆಂದರೆ, ಮಗುವಿನ ಜೀವನ ಕೂಡ ತುಂಬಿದ ಕೊಡದ ಹಾಗೆ ತುಂಬು ಜೀವನ ನಡೆಸಲಿ ಎಂಬುದು ಜನಪದರ ಮುಖ್ಯ ಆಶಯವಾಗಿರುತ್ತದೆ. ಹೀಗೆ ನೀರು ಸಂಪ್ರದಾಯವಾಗಿ ಬಂದಿದೆ.

ಮದುವೆ ಕಾರ್ಯ

ಧಾರಣೀಯ ಸಂಸ್ಕಾರಯಲ್ಲಿ ಪ್ರತಿಯೊಬ್ಬರು ಗೃಹಸ್ಥಾಶ್ರಮಕ್ಕೆ ಹೋಗಲೆ ಬೇಕು. ಅಂತಹ ಸಂದರ್ಭದಲ್ಲಿ ನೀರು ಹೇಗೆ ಒಂದು ಸಂಪ್ರದಾಯವಾಗಿದೆ ಎಂದು ನೋಡುವುದಾದರೆ ಈ ನೀರು ಮದುವೆಗೆ ಕನ್ಯೆಯನ್ನು ನಿಶ್ಚಯಿಸಿದ ಮೇಲೆ ಕೆಲವು ಕಡೆಗಳಲ್ಲಿ ನೀರು ತುಂಬುವ ಚರಗಿಯನ್ನು ಇಟ್ಟು ಪೂಜಿಸುವ ಪದ್ಧತಿ ಕಂಡುಬರುತ್ತದೆ. ಇದಕ್ಕೆ ಕಾರಣ ನೀರಿನ ಮೇಲೆ ಪ್ರಮಾಣ ಮಾಡಿ ಒಪ್ಪಿಗೆ ಸೂಚಿಸುವ ಸಂಕೇತ ಎಂದು ಹೇಳುತ್ತಾರೆ. ಮದುವೆ ಪ್ರಾರಂಭದಲ್ಲಿ ಅನೇಕ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ಸಾಮಾನ್ಯವಾಗಿ ಒಳಕಲ್ಲು ಶಾಸ್ತ್ರ, ಬೀಸುವ ಕಲ್ಲಿನ ಶಾಸ್ತ್ರ ನಂತರ ಲಕ್ಷ್ಮಿ ಪೂಜೆ, ಮನೆದೇವರ ಪೂಜೆ ಹಲವು ಪೂಜಾವಿಧಾನಗಳು ನೆರವೇರಿದಾಗ ಅಲ್ಲಿ ಪ್ರತಿ ಪೂಜೆಯಲ್ಲಿ ನೀರು ಕೂಡ ಪ್ರಮುಖ ಸ್ಥಾನ ಪಡೆದಿದೆ. ಮದುವೆಯಲ್ಲಿ ನೀರು ತುಂಬಿದ ಕೊಡ ಅಥವಾ ಚರುಗೆಯನ್ನು ಇಟ್ಟು ಪೂಜೆ ಮಾಡುತ್ತಾರೆ. ಈ ತುಂಬಿದ ಕೊಡ ಸುಖ–ಸಮೃದ್ಧಿಯಿಂದ ತುಂಬಿದ ಜೀವನ ಇರಬೇಕೆಂಬ ಸಂಕೇತ ಸಾಮಾನ್ಯವಾದರೆ ಈ ನೀರು ತುಂಬಿದ ಕೊಡ. ಅದೇ ರೀತಿಯಲ್ಲಿ ಮದುವೆಯಲ್ಲಿ ಸುರಗಿ ಕಾರ್ಯದಲ್ಲಿ ನೀರು ಅತ್ಯವಶ್ಯಕವಾಗಿ ಬೇಕು. ಏಕೆಂದರೆ ವಧು–ವರರಿಗೆ ಅರಿಶೀಣ ಶಾಸ್ತ್ರ ಮುಗಿದ ನಂತರ ಅವರಿಗೆ ಸ್ನಾನ ಮಾಡಿಸುವುದೆ 'ಸೂರಗಿ' ಕಾರ್ಯಕ್ರಮ. ಈ ಸೂರಗಿ ಕಾರ್ಯಕ್ರಮದಲ್ಲಿ ನಾಲ್ಕು ದಿಕ್ಕಿನಲ್ಲಿ ನದಿ, ಕೆರೆ, ಬಾವಿಯಿಂದ ತಂದ ನೀರು ತುಂಬಿದ ಬಿಂದಿಗೆ ಇಟ್ಟು, ನಾಲ್ಕು ಕೊಡಗಳನ್ನು ನಾಲ್ಕು ದಿಕ್ಕಿನಲ್ಲಿಟ್ಟು, ಸುರಗಿ ದಾರ ಹಾಕಿ ಅದರ ಮಧ್ಯದಲ್ಲಿ ವಧು–ವರರನ್ನು ಕೂಡಿಸಿ, ಅವರಿಗೆ ಹಾಲು–ತುಪ್ಪವನ್ನು ಮೈಮೇಲೆ ಹಾಕಿ ನಂತರ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಇದರ ಸಂಕೇತ ನಮ್ಮಲ್ಲಿರುವ ಪಾಪ–ಕರ್ಮಗಳನ್ನು ಶುದ್ಧಗೊಳಿಸಿ ಹೊಸ ಮನ್ವಂತರ ಕಾಲಕ್ಕೆ ಸಿದ್ಧರಾಗಿ ಎಂಬುದು ಜಲ ಶುದ್ಧಿಯ ಸಂಕೇತ.

ಮದುವೆಯಲ್ಲಿ ಮುಂದಿನ ಭಾಗ 'ಧಾರೆ ಎರೆಯುವ ಕಾರ್ಯ'. ಇದು ವಧು–ವರರ ಜೀವನದಲ್ಲಿ ಮಹತ್ತರವಾದ ಘಟ್ಟ ಎಂದು ಹೇಳಬಹುದು. ಅಂದರೆ ಗಂಡು–ಹೆಣ್ಣು ಹಿರಿಯರ ಸಾಕ್ಷಿಯಾಗಿ ಪ್ರಮಾಣ ಮಾಡಿ ಮದುವೆ ಆಗುತ್ತಾರೆ. ಇಲ್ಲಿ 'ಜಲ' ದೇವತೆಯ ಮೇಲೆ ಪ್ರಮಾಣ ಕಾರ್ಯ ನಡೆಯುತ್ತದೆ. ಹೇಗೆಂದರೆ ಗಂಡು–ಹೆಣ್ಣುವಿಗೆ ಅರಿಶೀಣ ಶಾಸ್ತ್ರ, ಸುರಗಿ ಶಾಸ್ತ್ರ, ನಂತರ ಮಾಂಗಲ್ಯ ಶಾಸ್ತ್ರಕ್ಕೆ ಬರುತ್ತಾರೆ. ಮಾಂಗಲ್ಯ ಶಾಸ್ತ್ರ ನಡೆಯುವ ಪೂರ್ವದಲ್ಲಿ ಗುರುಹಿರಿಯರ ಎದುರು ಹೆಣ್ಣಿನ ಸೋದರ ಮಾವ ಸಹಪತ್ನಿಯೆ ಜೊತೆ ಸೇರಿ ಹಾಲು–ತುಪ್ಪ ಮತ್ತು ನೀರನ್ನು ಅವರ ಕೈ ಮೇಲೆ ಹಾಕಿ ಪ್ರಮಾಣ ಮಾಡಿ ಧಾರೆ ಎರೆಯುತ್ತಾರೆ. ಅಂದರೆ 'ಜಲದೇವಿ'ಯ ಸಾಕ್ಷಿಯಾಗಿ ನಾನು ನನ್ನ ಸೊಸೆಯನ್ನು

ಧಾರೆ ಎರೆದು ಕೊಡುತ್ತೇನೆ ಎಂದು ಹೇಳುತ್ತಾರೆ. ಹಾಗಾಗಿ ನೀರು ಪ್ರಮುಖ ಸ್ಥಾನ ಪಡೆದಿದೆ. ಮದುವೆಯ ನಂತರ ವಧುವಿನ ಕೈಯಲ್ಲಿ 'ಕೆಲು ಹೊಡಿಯುವುದು' (ಕೆಲು ತರುವುದು) ಎಂಬ ಶಾಸ್ತ್ರ ಮಾಡಿಸುತ್ತಾರೆ. ಇಲ್ಲಿ ಮನೆಗೆ ಸೊಸೆಯಾಗಿ ಬಂದ ನವ ವಧು ಮೊದಲ ದಿನ ಊರಿನ ಹತ್ತಿರದ ಕೆರೆ, ಬಾವಿ, ಹಳ್ಳಗಳಿಗೆ ಹೋಗಿ ಅಲ್ಲಿ ಗಂಗಾದೇವಿಯನ್ನು ಸ್ಥಾಪಿಸಿ, ಪೂಜೆಯನ್ನು ಮಾಡಿ ನಂತರ ಕೊಡ ಅಥವಾ ಬಿಂದಿಗೆಯನ್ನು ಗಂಗಾದೇವಿಯನ್ನು ಸ್ಥಳಿಸಿಕೊಂಡು, ಬಿಂದಿಗೆಯನ್ನು ತುಂಬಿಕೊಂಡು ಬಂದು ಮನೆಯ ಬಾಗಿಲ ಬಳಿ ಮತ್ತೆ ತುಂಬಿದ ಕೊಡಕ್ಕೆ ಅವಳ ಗಂಡನ ಕೈಯಲ್ಲಿ ಪೂಜೆ ಮಾಡಿಸಿ, ಮನೆಯ ಹೊಸಿಲಿಗೆ ಮೊಳೆ ಬಡಿದು, ಮನೆಯ ಸೊಸೆಯನ್ನು ಮನೆ ತುಂಬಿಸಿಕೊಳ್ಳುತ್ತಾರೆ. ಅಂದರೆ ಮನೆಗೆ ಬಂದ ಸೊಸೆ ತುಂಬಿದ ಕೊಡದಂತೆ, ತುಂಬು ಜೀವನ ಸಾಗಿಸಲಿ ಎಂಬುದು ಜನಪದ ಸಂಪ್ರದಾಯದಲ್ಲಿ ಒಂದಾಗಿದೆ.

ಮಳೆರಾಯನ್ನು ಧರೆಗೆ ತರುವ ಸಂಪ್ರದಾಯಗಲು

ಊರಿನಲ್ಲಿ ಮಳೆ ಬರದಿದ್ದಾಗ ಊರಿನ ಮುಖಂಡರು ಸೇರಿ ಮಳೆರಾಯನ್ನು ಆಹ್ವಾನಿಸಬೇಕೆಂದು ಕೆಲವು ಸಂಪ್ರದಾಯ ಮಾಡುತ್ತಾರೆ. ಅವುಗಳಲ್ಲಿ ಊರಿನ ದ್ವಾರಬಾಗಿಲಲ್ಲಿರುವ ಬೊರಗಲ್ಲಿಗೆ ಊರಿನ ಸಣ್ಣ ಮಕ್ಕಳಿಂದ ಜಲಧಾರೆ ಮಾಡಿಸಿದರೆ ಮಳೆಯಾಗುತ್ತದೆ ಎಂದು ಹಲವು ಭಾಗಗಳಲ್ಲಿ ಆಚರಣೆಗಳಿವೆ.

ಮಳೆರಾಯನನ್ನು ಭೂಮಿಗೆ ಕರೆ ತರುವ ಹಲವು ಆಚರಣೆಗಳಲ್ಲಿ 'ಗಾರ್ಚಿಯಾಡುವ ಪದ್ಧತಿ' ಇದು ಕೂಡ ಒಂದು. ಇಲ್ಲಿ ಮುಖ್ಯವಾಗಿ ಜರಡಿಯನ್ನು ದೋರಲಾಗಿ ಇಟ್ಟುಕೊಂಡು(ಕೆಲವು ಕಡೆ ರೊಟ್ಟಿ ಹಂಚನ್ನು ಬಳಸುತ್ತಾರೆ) ಅದರ ಮೇಲೆ ಸಗಣಿಯಿಂದ ಗುಳ್ಳವ್ವನನ್ನು ಮಾಡಿಕೊಂಡು ಅದಕ್ಕೆ ಹೂವು ಜುಜ್ಜಿ ಒಲ್ಲ ಬೆತ್ತಲೆಯ ಹುಡುಗನ ತಲೆಯ ಮೇಲೆ ಇಟ್ಟುಕೊಂಡು ಮನೆ ಮನೆಗೆ ಹೋಗಿ ಅದರ ಮೇಲೆ ಪ್ರತಿ ಮನೆಯವರು ಅದರ ಮೇಲೆ ನೀರು ಸುರಿಸುತ್ತ ಸಡಗರದಿಂದ ಹಾಡನ್ನು ಹಾಡುತ್ತ ಇಡೀ ಊರಿನ ಮನೆಯಿಮದಂದ ನೀರು ಹಾಕಿಸಿಕೊಂಡು ಬರುತ್ತಾರೆ. ಅಲ್ಲಿ ಜರಡಿಯ ಮೇಲಿರುವ ಗುಳ್ಳವ್ವನಿಗೆ ನೀರು ಹಾಕುತ್ತಿರುವಾಗ ಹುಡುಗ 'ಜಲ್ಲ ಜಲ್ಲ ಗುಳ್ಳವ್ವ' ಎಂದು ಹಾಡು ಹೇಳುತ್ತಿದ್ದ. ಆಗ ಅದರ ಮೇಲೆ ಹಾಕಿದ ನೀರು ಚಕ್ರಾಕಾರವಾಗಿ ನೀರು ಛಿದ್ರಗೊಳ್ಳುತಿತ್ತು. ಅದೇ ರೀತಿ ಮಳೆಯೂ ಧರೆಗೆ ಸುರಿಯಲಿ ಎಂಬ ಆಶಯ ಅವರದಾಗಿತ್ತು ಆ ಆಚರಣೆ ಮಾಡುವುದರಿಂದ ಮಳೆ ಬರುತ್ತದೆ ಎಂಬ ಬಲವಾದ ನಂಬಿಕೆ ನಮ್ಮ ಪೂರ್ವಜರಲ್ಲಿತ್ತು.

Co-ordinator IQAC
B.A.J.S.S. College for Women RANEBENNUR 581115
PRINCIPAL
B.A.J.S.S. College For Women
Halageri Road, Ranebennur